ರೂ.ಗಳನ್ನು announce ಮಾಡಿತ್ತು. ಆದರೆ ನಮ್ಮ ಸರ್ಕಾರ ಹೆಚ್ಚುವರಿಯಾಗಿ 600/– ರೂ.ಗಳನ್ನು ಕೊಡುವಂತಹ ಕೆಲಸವನ್ನು ಮಾಡಿದೆ. ಈಗ ನಾವು ಕ್ವಿಂಟಾಲ್‌ಗೆ 7,500/– ರೂ.ಗಳನ್ನು ಕೊಟ್ಟು ಖರೀದಿಸುವ ಕೆಲಸವನ್ನು ಮಾಡಿದ್ದೇವೆ. ಕೇಂದ್ರ ಸರ್ಕಾರ ಖರೀದಿಗೆ ನಿಗದಿಪಡಿಸಿದ ದಿನಾಂಕ 17.4.2010ಕ್ಕೆ ಮುಗಿದ್ದಿತ್ತು ಆದರೂ ನಾವು 30.06.2010ರವರೆಗೆ ಒಂದೂವರೆ ತಿಂಗಳು ಹೆಚ್ಚಿಗೆ ಅವಧಿಗೆ ಖರೀದಿ ಮಾಡಿದ್ದೇವೆ. ಆದರೆ ಆ ರೀತಿ ತೊಂದರೆ ಏನೂ ಆಗಿಲ್ಲ. ರೇಟ್ ಕೂಡ ಚೆನ್ನಾಗಿದೆ. ರೇಟ್ ಬಗ್ಗೆ ಅಂಥಾದ್ದೇನೂ ತೊಂದರೆಯಿಲ್ಲ. ಮಾನ್ಯ ಬಂಗೇರರವರು, ಕ್ಯಾಂಪ್ಕೋದವರು ರಾಜಕಾರಣ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದರು. ಆದರೆ ಇಲ್ಲಿ ರಾಜಕಾರಣ ಮಾಡುವಂತಹ ಪ್ರಶ್ನೆ ಬರುವುದಿಲ್ಲ. ಏಕೆಂದರೆ ಕ್ಯಾಂಪ್ಕೋ ಮೊದಲಿನಿಂದಲೂ ಪ್ರಮಾಣಿಕವಾಗಿ ಒಳ್ಳೆಯ ಕೆಲಸವನ್ನು ಮಾಡಿಕೊಂಡು ಬರುತ್ತಿದೆ. ಇವತ್ತು ನಮ್ಮ ಗಮನಕ್ಕೆ ತಂದಿದ್ದೀರಿ. ನಾವು ಆ ಬಗ್ಗೆ ಪರಿಶೀಲನೆ ಮಾಡಿ, ಆ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ. ನಮ್ಮ ಸರ್ಕಾರ ರೈತರ ಬಗ್ಗೆಯೇ ಸದಾ ಚಿಂತನೆ ಮಾಡುತ್ತದೆ. ರೈತರ ಬಗ್ಗೆಯೇ ನಮ್ಮ ಸರ್ಕಾರ ಹೆಚ್ಚು ಪ್ರಾಮಾಣಿಕವಾಗಿ ಕೆಲಸ ಮಾಡತ್ತಿರುವುದರಿಂದ ಯಾವುದೇ ತೊಂದರೆಯಾಗದ ರೀತಿಯಲ್ಲಿ ಕ್ಯಾಂಪ್ಕೋದವರನ್ನು ಕರೆಸಿ, ನಾನು ಮಾತನಾಡುತ್ತೇನೆ. ಆ ರೀತಿ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ನಾನು ಕ್ರಮವನ್ನು ಕೈಗೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಸಹಕಾರಿ ಬ್ಯಾಂಕುಗಳಿಗೆ ನಾಮನಿರ್ದೇಶನ ಮಾಡುವ ಬಗ್ಗೆ

70(404) ಶ್ರೀ ಶಿವಲಿಂಗೇಗೌಡ ಕೆ ಎಂ (ಅರಸೀಕೆರೆ)ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರಿ ಬ್ಯಾಂಕುಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸರ್ಕಾರದ ವತಿಯಿಂದ ಸಾರ್ವಜನಿಕರನ್ನು ನಾಮನಿರ್ದೇಶನ ಮಾಡಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಈ ನಾಮನಿರ್ದೇಶನ ಮಾಡಲು ಅನುಸರಿಸುತ್ತಿರುವ ನಿಯಮಗಳಾವುವು?

ಲಕ್ಷ್ಮಣ ಸ. ಸವದಿ(ಸಹಕಾರ ಸಚಿವರು):

ಅ) ಹೌದು.

ಆ) ಸರ್ಕಾರದಿಂದ ಷೇರು ಬಂಡವಾಳ, ಸಾಲ ಅಥವಾ ಅನುದಾನ ಪಡೆಯುತ್ತಿರುವ ಸಹಕಾರ ಸಂಘಗಳಿಗೆ ಹಾಗೂ ಸಹಕಾರ ಸಂಘಗಳು ಆರ್ಥಿಕ ಸಂಸ್ಥೆಗಳಿಂದ ಪಡೆಯುವ ಸಾಲ ಮರುಪಾವತಿ ಅಥವಾ ಬಡ್ಡಿ ಪಾವತಿಗೆ ಸರ್ಕಾರದ ಖಾತರಿ ಪಡೆಯುತ್ತಿರುವ ಸಹಕಾರ ಸಂಸ್ಥೆಗಳಿಗೆ ಪ್ರಕರಣ 29(1)ರ ಅಡಿಯಲ್ಲಿ ಸಾಮಾನ್ಯ ಮಹಿಳಾ ಮತ್ತು ಪ.ಜಾ/ಪ.ಪಂ.ವರ್ಗಗಳಿಗೆ ಅನುಸಾರವಾಗಿ, ಮೂವರನ್ನು ನಾಮನಿರ್ದೇಶನ ಮಾಡಲಾಗುತ್ತದೆ. ಪ್ರಕರಣ 29ರಲ್ಲಿ ಏನೇ ಒಳಗೊಂಡಿದ್ದಾಗ್ಯೂ ಸಹ ರಾಜ್ಯ ಸರ್ಕಾರವು ಒಂದು ಸಹಕಾರ ಸಂಘದ ಷೇರು ಬಂಡವಾಳಕ್ಕೆ – (ಅ) ಒಟ್ಟು ಷೇರು ಬಂಡವಾಳದ ಶೇಕಡ ಐವತ್ತು, ಅಥವಾ (ಆ) ಐದು ಲಕ್ಷ ರೂಪಾಯಿಗಳಿಗೆ ಕಡಿಮೆ ಇಲ್ಲದಷ್ಟು ವಂತಿಕೆಯನ್ನು ನೀಡಿದ್ದಲ್ಲಿ, ಅಂತಹ ಸಹಕಾರ ಸಂಘದ ಸಮಿತಿಯ ಸದಸ್ಯರ ಒಟ್ಟು ಸಂಖ್ಯೆ ಮೂರನೇ ಒಂದರಷ್ಟು ಸದಸ್ಯರನ್ನು (ಪ್ರಕರಣ 29(1)ರಡಿಯಲ್ಲಿ ಮಾಡಿದ ನಾಮನಿರ್ದೇಶನಗಳು ಸೇರಿ) ಪ್ರಕರಣ 53ಎ ಅಡಿಯಲ್ಲಿ ನಾಮನಿರ್ದೇಶನ ಮಾಡಲಾಗುತ್ತಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ಕ್ಕೆ ತಿದ್ದುಪಡಿ ತಂದಿದ್ದು, ನಾಮನಿರ್ದೇಶನಕ್ಕೆ ಸಂಬಂಧಿಸಿದ ತಿದ್ದುಪಡಿಯು ದಿನಾಂಕ 03.11.2009ರಿಂದ ಜಾರಿಗೆ ಬಂದಿರುತ್ತದೆ. ಅಧಿನಿಯಮದಲ್ಲಿ ಸೇರ್ಪಡೆಗೊಂಡ ಪ್ರಕರಣ 98ಜಿ ರೀತ್ಯಾ ಸರ್ಕಾರದ ಷೇರುಧನವಿದ್ದಲ್ಲಿ ಮಾತ್ರ ರಾಜ್ಯ ಸಹಕಾರಿ ಬ್ಯಾಂಕು, ಕೇಂದ್ರ ಸಹಕಾರಿ ಬ್ಯಾಂಕು ಮತ್ತು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಆಡಳಿತ ಸಮಿತಿಗೆ ಒಬ್ಬ ವ್ಯಕ್ತಿಯನ್ನು ಮಾತ್ರ ನಾಮನಿರ್ದೇಶನ ಮಾಡಬಹುದಾಗಿದೆ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳೀಗೆ ನಾಮನಿರ್ದೇಶನ ಮಾಡಲು ಅವಕಾಶವಿರುವುದಿಲ್ಲ.

10:40 ಎ.ಎಂ.

ಶ್ರೀ ಕೆ ಎಂ ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಸಹಕಾರಿ ಬ್ಯಾಂಕುಗಳಿಗೆ ನಾಮನಿರ್ದೇಶನ ಮಾಡುವ ಸಂದರ್ಭದಲ್ಲಿ ಇತ್ತೀಚಿನ ಕಾನೂನಿನ ತಿದ್ದುಪಡಿಯಲ್ಲಿ ಒಂದು ಸಹಕಾರಿ ಸಂಸ್ಥೆಗೆ ಒಬ್ಬರನ್ನು ನಾಮನಿರ್ದೇಶನ ಮಾಡುವಂತಹ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೀರಿ. ಅದರಿಂದ ಸರ್ಕಾರದ ಘನತೆಯನ್ನು ಎತ್ತಿ ಹಿಡಿಯುವುದಕ್ಕೆ ಸರ್ಕಾರದ ಪರವಾಗಿ ಕೆಲಸ

ಮಾಡುವುದಕ್ಕೆ ಸಾಕಾಗುವುದಿಲ್ಲವೆನ್ನುವುದು ನನ್ನ ಅನಿಸಿಕೆ. ಅದರ ಜೊತೆಯಲ್ಲಿ ಷೇರು ಬಂಡವಾಳವನ್ನು ಸರ್ಕಾರದಿಂದ ಪಡೆಯದೆ ಇದ್ದರೆ, ಸ್ವಾಯತ್ತತೆಯಿಂದ ಬ್ಯಾಂಕುಗಳನ್ನು ನಡೆಸುವ ರೀತಿಯಲ್ಲಿ, ನಿಜವಾಗಲು ಕುಂಠಿತವಾಗುವುದಿಲ್ಲವೆ ಎನ್ನುವ ಭಾವನೆ ನನ್ನ ಮನಸ್ಸಿನಲ್ಲಿದೆ. ಜೊತೆಗೆ ಇಲ್ಲಿ ಯಾರನ್ನು ನಾಮನಿರ್ದೇಶನ ಮಾಡುತ್ತೀರಿ, ಅವರನ್ನು ನಾಮನಿರ್ದೇಶನ ಮಾಡುವ ಸಂದರ್ಭದಲ್ಲಿ ಅದಕ್ಕೆ ಮಾನದಂಡಗಳನ್ನೇನಾದರೂ ಫಿಕ್ಸ್ ಮಾಡಿದ್ದೀರಾ? ಅಲ್ಲಿ ಯಾವ ಆಧಾರದ ಮೇಲೆ ನಾಮನಿರ್ದೇಶನ ಮಾಡುತ್ತೀರಿ, ಬಹುಶ: ನಾಮನಿರ್ದೇಶನ ಮಾಡುವ ಸಂದರ್ಭದಲ್ಲಿ ಕೆಲವೊಂದು ಗುಣಮಟ್ಟದ ಮಾನದಂಡಗಳನ್ನು ಉಪಯೋಗಿಸಬೇಕು, ಆ ಒಂದು ಸಂಸ್ಥೆಗೆ ನಾಮನಿರ್ದೇಶನವನ್ನು ಮಾಡಿದರೆ ಅವರು ಸರ್ಕಾರದ ಪರವಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಒಂದು ಉತ್ತಮವಾದ ಜವಾಬ್ದಾರಿಯುತ ಕಾರ್ಯನಿರ್ವಹಣೆ ಮಾಡಬಹುದೆನ್ನುವುದು ನನ್ನ ಅನಿಸಿಕೆ. ಅದಕ್ಕೆ ಸಹಕಾರಿ ಸಚಿವರನ್ನು, ಆ ನಾಮನಿರ್ದೇಶನ ಮಾಡುವ ಸಂದರ್ಭದಲ್ಲಿ ಕೆಲವೊಂದು ಮಾನದಂಡಗಳನ್ನು ಉಪಯೋಗಿಸಿ ನಾಮನಿರ್ದೇಶನ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಶ್ರೀ ಲಕ್ಷ್ಮಣ ಎಸ್ ಸವದಿ: ಸರ್ಕಾರ ಕೊಟ್ಟಿರುವ ಷೇರು ಹಣದ ಬಗ್ಗೆ ಮತ್ತು ಆ ಸಂಸ್ಥೆ ಒಳ್ಳೆಯ ರೀತಿಯಲ್ಲಿ ನಡೆಯುವಂಥ ಕಾಳಜಿಯನ್ನು ವಹಿಸತಕ್ಕಂಥ ಜವಾಬ್ದಾರಿ ಅವನ ಮೇಲಿರುತ್ತದೆ. ಅದರ ಜೊತೆಗೆ ಅವರು ಇನ್ನೊಂದು ಸಲಹೆ ಕೊಟ್ಟರು ಅದೇನೆಂದರೆ, ಯಾವ ಸಂಸ್ಥೆಯಲ್ಲಿ ಷೇರು ಬಂಡವಾಳವಿರುವುದಿಲ್ಲ, ಆ ಸಂಸ್ಥೆ ಸಧೃಡವಾಗಿ ನಡೆಯುವುದಕ್ಕೆ ಸ್ವಲ್ಪ ಕುಂಠಿತವಾಗಬಹುದು, ಅಂಥ ಸಂಸ್ಥೆಗಳಿಗೆ ಷೇರು ಬಂಡವಾಳವನ್ನು ಕೊಡುವ ಚಿಂತನೆಯಾಗಬೇಕೆನ್ನುವ ರೀತಿಯಲ್ಲಿ ಅವರು ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಯಾವುದೇ ಸಂಸ್ಥೆಯವರು, ನಮ್ಮ ಸಂಸ್ಥೆಗೆ ಷೇರು ಬಂಡವಾಳ ಬೇಕೆಂದು ಬೇಡಿಕೆಯನ್ನಿಟ್ಟಾಗ ಷೇರು ಬಂಡವಾಳವನ್ನು ಕೊಡುವುದಕ್ಕೆ ಚಿಂತನೆಯನ್ನು ಮಾಡುತ್ತದೆ, ನಾವು ಕೊಡುವುದಕ್ಕು ಕೂಡ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ತಮ್ಮ ಮುಖಾಂತರ ಈ ಸಂದರ್ಭದಲ್ಲಿ ಅವರಿಗೆ ಹೇಳಬಯಸುತ್ತೇನೆ.

ಜಲಾಯನ ಮತ್ತು ಬಂಜರು ಭೂಮಿ ಅಭಿವೃದ್ಧಿಯ ಬಗ್ಗೆ